**ಇಎಕ್ಸ್. ನಂ. 51/2011 ಪಿ.ಡಬ್ಲೂ-1 ಹೆಸರು - ರಮೇಶ**

ಸಾಕ್ಷಿಯನ್ನು ದಿನಾಂಕಃ **02.06.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಂ ಜೆ ಎಸ್ ವಕೀಲರಿಂದಃ-

ನನ್ನ ತಂದೆಗೆ ಇಬ್ಬರು ಪತ್ನಿಯರಿದ್ದು ಅಮ್ಮನಮ್ಮ ಮತ್ತು ಶಾಂತಮ್ಮ ಆಗಿರುತ್ತಾರೆ. ನಾನು ಮೊದಲನೇ ಪತ್ನಿಯಾದ ಅಮ್ಮಣ್ಣಮ್ಮನವರ ಮಗನಾಗಿರುತ್ತೇನೆ. ನನ್ನ ತಂದೆಗೆ ಅರ್ಜಿಯಲ್ಲಿ ನಮೂದಿಸಿರುವ ಸ್ವತ್ತನ್ನು ಹೊರತುಪಡಿಸಿ ಇತರೆ ಯಾವುದೇ ಸ್ವತ್ತು ಇಲ್ಲ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ನಾನು ನನ್ನ ತಂದೆ ಅನ್ಯೋನ್ಯವಾಗಿದ್ದೆವು. ನನ್ನ ತಂದೆ ನನ್ನನ್ನು ನೋಡಿಕೊಳ್ಳುತ್ತಾ ಇರಲಿಲ್ಲ. ನನ್ನ ಮತ್ತು ನನ್ನ ತಂದೆಯ ನಡುವೆ ಯಾವುದೇ ವ್ಯವಹಾರ ಇರಲಿಲ್ಲ. ನಾನು ನನ್ನ ತಂದೆಯನ್ನು ನೋಡಲು ಬರುತ್ತಿರಲಿಲ್ಲ. ಅರ್ಜಿಯಲ್ಲಿ ನಮೂದಿಸಿರುವ ದೇಬೂರು ಗ್ರಾಮದ ಸರ್ವೆ ನಂ. 314 ರ 01 ಎಕರೆಯಲ್ಲಿ ನನ್ನ ತಂದೆಗೆ 10 ಗುಂಟೆ ಇಸ್ಸೆ ಬಂದಿದ್ದ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ, ಅವರು ಭಾಗ ಮಾಡಿಕೊಂಡಿರಲಿಲ್ಲ ಎಂದು ಹೇಳಿರುತ್ತಾರೆ. ನನ್ನ ತಂದೆಗೆ 10 ಗುಂಟೆ ಸ್ವತ್ತು ಪಿತ್ರಾರ್ಜಿತವಾಗಿ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 04.07.2005 ರಲ್ಲಿ ನನ್ನ ತಂದೆ ಡಿಕ್ರಿದಾರರಾದ ಮೃತ ಬಸವೇಗೌಡರವರಿಗೆ ಸರ್ವೆ ನಂ. 314 ರ 10 ಗುಂಟೆ ಜಮೀನನ್ನು ಮಾರಾಟಕ್ಕೆ ನೀಡಲು ಒಪ್ಪಿ ರೂ. 22,500/- ಪ್ರತಿಫಲದ ಮೊತ್ತದ ಪೈಕಿ ರೂ. 5,000/- ಮುಂಗಡ ಹಣ ಪಡೆದಿದ್ದರು ಎಂದರೆ ಗೊತ್ತಿಲ್ಲ. ಸದರಿ ಕ್ರಯದ ಕರಾರಿನ ಪ್ರಕಾರ ನನ್ನ ತಂದೆ ನೋಂದಣಿ ಕ್ರಯ ಮಾಡಿ ಕೊಡದ ಕಾರಣ ಮೃತ ಬಸವೇಗೌಡರವರು ನನ್ನ ತಂದೆಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 149/2007 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯು ದಿನಾಂಕ 13.01.2009 ರಂತೆ ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ದಿನಾಂಕ 04.07.2005 ರ ಕ್ರಯದ ಕರಾರಿನ ಕುರಿತು ಹಾಗೂ ಅಸಲು ದಾವಾ ಸಂಖ್ಯೆ 149/2007 ರ ದಾವೆಯ ಕುರಿತು ಹಾಗೂ ಡಿಕ್ರಿಯ ಕುರಿತು ನನಗೆ ಮಾಹಿತಿಯನ್ನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಯಾವ ವರ್ಷದಲ್ಲಿ ಮೃತಪಟ್ಟಿದ್ದಾರೆ ಎಂದು ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 149/2007 ರ ದಿನಾಂಕ 13.01.2009 ರ ಡಿಕ್ರಿಯ ಪಾಲನೆಗಾಗಿ ಈ ಅಮಲ್ಜಾರಿ ಅರ್ಜಿ ಯನ್ನು ಸಲ್ಲಿಸಿದ ನಂತರದಲ್ಲಿ ನನ್ನ ತಂದೆ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಂದೆಯ ವಾರಸುದಾರರನ್ನು ಈ ಅಮಲ್ಜಾರಿ ಅರ್ಜಿಯಲ್ಲಿ ಸೇರಿಸಿದ್ದಾರೆ ಎಂದರೆ ಸಾಕ್ಷಿ ನನಗೆ ನೋಟಿಸ್ ಬಂದ ನಂತರದಲ್ಲಿಯೇ ಈ ಅಮಲ್ಜಾರಿ ಅರ್ಜಿಯ ಕುರಿತು ತಿಳಿಯಿತು ಎಂದು ಹೇಳುತ್ತಾರೆ. ನ್ಯಾಯಾಲಯದಿಂದ ನೋಟಿಸ್ ಬಂದ ನಂತರ ದಿನಾಂಕ 05.01.2015 ರಂದು ನಾನು ನನ್ನ ವಕೀಲರ ಮೂಲಕ ಈ ಪ್ರಕರಣದಲ್ಲಿ

ಹಾಜರಾಗಿದ್ದೇನೆ ಎಂದರೆ ಸರಿ. ನಿಡಿ 1 ರ ಪಾಲುಪಟ್ಟಿಯನ್ನು ಯಾವ ದಿನಾಂಕದಂದು ಜಾರಿ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಸದರಿ ಪಾಲುಪಟ್ಟಿ ನೋಟೀಸ್ ಸಮಕ್ಷಮ ಜಾರಿಯಾಗಿರುವ ಪತ್ರ ಎಂದರೆ ಸರಿ. ನನ್ನ ತಂದೆಯ ಹೆಸರು ಎಸ್ ತಮ್ಮಯ್ಯ ಎಂದರೆ ಸರಿ. ನಾವು ನ್ಯಾಯಾಲಯಕ್ಕೆ ನೀಡಿರುವ ಪಾಲುಪಟ್ಟಿಯಲ್ಲಿ ತಮ್ಮಯ್ಯ ಎಂದು ಮಾತ್ರ ಸಹಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಹಾಗಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ 1 ರ ದಾಖಲಾತಿಯನ್ನು ತೋರಿಸಿ ಕೇಳಲಾಗಿ ತಮ್ಮಯ್ಯ ಎಂದು ಮಾತ್ರ ಸಹಿ ಇದೆ ಎಂದು ಒಪ್ಪುತ್ತಾರೆ. ನಿಡಿ 1 ದಾಖಲಾತಿಯ ಆಧಾರದಲ್ಲಿ ನನ್ನ ಪಾಲಿನ ಪ್ರತ್ಯೇಕ ಹಿಸ್ಸೆಯನ್ನು ಕೋರಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಈ ಪ್ರಕರಣದಲ್ಲಿ ಹಾಜರಾದ ನಂತರದಲ್ಲಿ ನನ್ನ ತಂದೆಯ ವಿರುದ್ಧ ಅಸಲು ದಾವಾ ಸಂಖ್ಯೆ 149/2007 ರಲ್ಲಿ ಡಿಕ್ರಿ ಆಗಿರುವ ವಿಚಾರ ತಿಳಿಯಿತು. ಸದರಿ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಆ ರೀತಿ ಮೇಲ್ಮನವಿ ಸಲ್ಲಿಸುವ ಬಗ್ಗೆ ತಿಳಿದಿಲ್ಲ ಎಂದು ಹೇಳಿರುತ್ತಾರೆ. ನನಗೆ ಅಸಲು ದಾವಾ ಸಂಖ್ಯೆ149/2007 ಹಾಗೂ ಈ ಅಮಲ್ಜಾರಿಯ ಕುರಿತು ಎಲ್ಲಾ ಮಾಹಿತಿ ಇದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 149/2007 ರ ಡಿಕ್ರಿಯ ಜಾರಿಯಾಗುವುಕೆಯಲ್ಲಿ ತಪ್ಪಿಸಲು ನಿಡಿ 1 ಪಾಲುಪಟ್ಟಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 149/2007 ರ ಡಿಕ್ರಿಯನ್ನು ಪ್ರಶ್ನಿಸದ ಕಾರಣ ನಿಡಿ 1 ಆಧಾರದಲ್ಲಿ ಯಾವುದೇ ಹಿಸ್ಸೆಯನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಿತಾವಧಿಯಲ್ಲಿ ಡಿಕ್ರಿಯಾಗಿರುವ ಕಾರಣ ಸದರಿ ನನ್ನನ್ನು ಸೇರಿದಂತೆ ನನ್ನ ತಂದೆ ಇತರೆ ವಾರಸುದಾರರಿಗೂ ಕೂಡ ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 1 ರ ಆಧಾರದಲ್ಲಿ ಈ ಅಮಲ್ಜಾರಿ ಅರ್ಜಿಯಲ್ಲಿ ಯಾವುದೇ ಹಿಸ್ಸೆಯನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 149/2007 ರ ಡಿಕ್ರಿಯನ್ನು ಪ್ರಶ್ನಿಸದ ಕಾರಣ ಹಾಗೂ ನಿಡಿ 1 ಆಧಾರದಲ್ಲಿ ಪ್ರತ್ಯೇಕ ದಾವೆಯನ್ನು ಸಲ್ಲಿಸಿ ಹಿಸ್ಸೆಯನ್ನು ಕೋರದ ಕಾರಣ ಈ ಅಮಲ್ಜಾರಿ ಅರ್ಜಿಯಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಸಹಿ/-

ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,

ನಂಜನಗೂಡು